





## ನಮ್ಮ ಮೆಟ್ರೊ... ನಮ್ಮ ಕನ್ನಡ!

ಬೆಂಗಳೂರಿನ ಉದ್ದಗಲಕ್ಕೂ ಮೆಟ್ರೊ ರೈಲಿನ ಕಾಮಗಾರಿ ಭರದಿಂದ ಸಾಗುತ್ತಿದೆ. ಈ ಕಾಮಗಾರಿ ಭರಾಟೆಯ ನಡುವೆ ಕನ್ನಡಕ್ಕೆ ಒದಗಿದ ಸ್ಥಿತಿಯನ್ನು ಈ ಎರಡೂ ಚಿತ್ರಗಳು ಸೂಚ್ಯವಾಗಿ ಹೇಳುತ್ತಿವೆ. ಈ ಚಿತ್ರಗಳನ್ನು ನೋಡಿದಾಕ್ಷಣ ನಮ್ಮ ಬೆಂಗಳೂರಿನಲ್ಲಿ ಇದ್ಯಾವ ಹೊಸ 'ದುಟ್ರೋ ಕಾಮಗಾರಿ' ಶುರುವಾಗಿದೆ ಅಂತ ಹುಬ್ಬೇರಿಸಬೇಡಿ! ಹಾಗೆಯೇ ಈ ಸ್ಥಳದಿಂದ ಸ್ವಲ್ಪ ಮುಂದೆ ಸಾಗಿದರೆ ಇನ್ನೊಂದು ಫಲಕ ಕಾಣುತ್ತದೆ. ಅದರಲ್ಲಿ, 'ದಂಡೆ ಸಾಮೆ ಆಗಬಹುದು' ಎಂದಿದೆ. ಇದ್ಯಾವ ಪದವೆಂದು ತಲೆಗೆ ಹುಳು ಬಿಟ್ಟುಕೊಳ್ಳಬೇಡಿ.

ಮೊದಲ ಚಿತ್ರದಲ್ಲಿ ಬರೆದಿರುವ 'ದುಟ್ರೋ' ಎಂಬ ಪದದ ಜಾಗದಲ್ಲಿ 'ಮೆಟ್ರೋ' ಎಂದು ಹಾಗೂ ಎರಡನೆಯ ಚಿತ್ರದಲ್ಲಿ ಬರೆದಿರುವ 'ದಂಡೆ ಸಾಮೆ' ಅನ್ನುವ ಪದದ ಜಾಗದಲ್ಲಿ 'ದಂಡವೂ ಸಹ ಸಾವೇ ಆಗಬಹುದು' ಎಂದು ಬರೆಯಬೇಕಿತ್ತು. ಇದನ್ನು ತುಂಬ ಕಷ್ಟ ಪಟ್ಟು ಅರ್ಥೈಸಿಕೊಳ್ಳಬೇಕು. ಇವೆಲ್ಲವೂ 'ನಮ್ಮ ಮೆಟ್ರೊ' ಕಾಮಗಾರಿ ನಡೆಯುತ್ತಿರುವ ಪ್ರದೇಶಗಳಲ್ಲಿ ಕಂಡು ಬರುವ ಕನ್ನಡದ ಅಣಿಮುತ್ತುಗಳ ಫಲಕಗಳು! ಕಣ್ಣಿಗೆ ಕಂಡಿದ್ದು ಇಷ್ಟು, ಕಾಣದ್ದು ಇನ್ನೆಷ್ಟೊ? ಅಂದ ಹಾಗೆ ಈ ಚಿತ್ರಗಳು ಬನ್ನೇರುಘಟ್ಟ ಮುಖ್ಯ ರಸ್ತೆಯ ಮೀನಾಕ್ಷಿ ದೇವಸ್ಥಾನದ ಬಳಿಯವು.

–ಆರ್. ವೀರೇಶ್ ಕುಮಾರ್, ಬೆಂಗಳೂರು



## ನಟಸಾರ್ವಭೌಮ ಹಕ್ಕಿಮರಿ!

ಅಂಗೈಯಲ್ಲಿ ಹೀಗೆ ಮುದ್ದಾಗಿ ಕೂತಿರುವ ಈ ಹಕ್ಕಿಮರಿ ಟಿಟ್ಟಿಭ (red wattled lapwing) ಎಂಬ ಜಾತಿಗೆ ಸೇರಿದೆ. ಬಯಲಿನಲ್ಲಿ ಬದುಕು ಕಟ್ಟಿಕೊಂಡಿರುವ ಈ ಹಕ್ಕಿ ನೆಲದಲ್ಲಿಯೇ ಗೂಡಿಡುತ್ತದೆ. ಹಗಲಿರುಳು ಅತ್ಯಂತ ಜಾಗರೂಕತೆಯಿಂದ ತನ್ನ ಮೊಟ್ಟೆ ಮರಿಗಳನ್ನು ಕಾಪಾಡಿಕೊಳ್ಳುವ ಪರಿಸರದ ಅದ್ಭುತ ಕಾವಲುಗಾರ ಪಕ್ಷಿಯಿದು. ತನ್ನ ವ್ಯಾಪ್ತಿಯಲ್ಲಿ ವೈರಿಜೀವಿಯ ಸಣ್ಣ ಇರುವಿಕೆ ಕಂಡುಬಂದರೂ ಸಾಕು ನೆಲದಿಂದ ಮೇಲಕ್ಕೆ ಹಾರಿ ಎಚ್ಚರಿಕೆಯ ಕೂಗು ಹಾಕುತ್ತಾ ವೈರಿಜೀವಿಯ ಸುತ್ತಾ ಹಾರಾಡಿ, ವೈರಿಯನ್ನು ಚಾಣಾಕ್ಷತನದಿಂದ ದಾರಿತಪ್ಪಿಸುತ್ತದೆ. ಅತ್ತ ಪೋಷಕರು ವೈರಿಯ ದಾರಿತಪ್ಪಿಸುವಾಗ ಇತ್ತ ಮರಿಗಳು ತಾವೇನು ಕಡಿಮೆ ಎಂಬಂತೆ ಇದ್ದಲ್ಲೇ ನಿಶ್ಚಲವಾಗಿ ಸತ್ತಂತೆ ನಟಿಸುತ್ತವೆ. ಅಕಸ್ಮಾತಾಗಿ ವೈರಿಯ ಕೈಗೆ ಸಿಕ್ಕಿಬಿದ್ದರೂ ಸಹ ತುಂಬಾ ಸಮಯದವರೆಗೆ ಮಿಸುಕಾಡದೇ ಸತ್ತಂತೆ ನಟಿಸುವ ಚಾಲಾಕಿ ಮರಿಗಳ ನಟನಾಕೌಶಲಕ್ಕೆ ಯಾವ ಪ್ರಶಸ್ತಿ ನೀಡಿದರೂ ಕಡಿಮೆಯೆ. ಬೇಟೆಯಾಡಲು ಬಂದ ವೈರಿಯು ಪೆಚ್ಚಾಗಿ ದೂರಾಗುವವರೆಗೆ ನಿರಂತರವಾಗಿ ಪೋಷಕ ಮತ್ತು ಮರಿಗಳ ನಡುವೆ ಸಂವಹನ ನಡೆದೇ ಇರುತ್ತದೆ. ಪರಿಸರ ವ್ಯವಸ್ಥೆಯಲ್ಲಿ ಬದುಕುಳಿಯಲು ಇವು ಕಲಿತುಕೊಂಡಿರುವ ಕೌಶಲವನ್ನು ಕಂಡು ಬೆರಗಾಗುವುದೊಂದೇ ನಮಗಿರುವ ಆಯ್ಕೆ.

–ಮಹೇಶ್ವರ ಹುರುಕಡ್ಲಿ, ಬಾಚಿಗೊಂಡನಹಳ್ಳಿ



## ಮರಕ್ಕೆ ಜೇಡ ಬಲೆ!

ಮರಗಳ ರಕ್ಷಣೆಯ ಉಪಾಯ ಹೇಗೆ? ಹೀಗೇನಾ? ಬಲೆಯ ಬೇಲಿ ಬೀಸಿಯಾ? ಈ ಚಿತ್ರ ಗೊಂದಲ ಮೂಡಿಸಿತಲ್ಲವೆ? ಇದು ಜೇಡರ ಬಲೆ. ಈ ಚಿತ್ರ ನೋಡಿದಾಕ್ಷಣ, ಯಾವುದೋ ಬೃಹತ್ ಗಾತ್ರದ ಜೇಡವೊಂದು ಇಡೀ ಮರವನ್ನು ಆವರಿಸುವಂತೆ ಬಲೆ ಹೆಣೆದಿದೆ ಅನಿಸುತ್ತದೆ. ಆದರೆ ವಾಸ್ತವದಲ್ಲಿ ಇದು ಕ್ಯಾಮೆರಾದ ಕೈಚಳಕ. ಮರದಿಂದ ಸ್ವಲ್ಪ ದೂರದಲ್ಲಿದ್ದ ಎರಡು ಪೊದೆಗಳ ನಡುವೆ ಬೇಟೆಗಾಗಿ ಜೇಡ ಹೆಣೆದ ಬಲೆ ಕಂಡಿತು. ಅದನ್ನು ಸೂಕ್ಷ್ಮವಾಗಿ ಗಮನಿಸಿದಾಗ ಇಡೀ ಮರಕ್ಕೆ ಜೇಡವು ಬಲೆ ಹೆಣೆದಂತೆ ಕಂಡಿತು. ಅದರ ಹಿಂದೆ ನಿಂತು ಚಿತ್ರ ತೆಗೆದ ಮೇಲಂತೂ ಇಡಿ ಚಿತ್ರವು ಇನ್ನಷ್ಟು ಪ್ರಖರವಾಗಿ ಕಂಡಿತು. ಇದು ಭ್ರಮಾ ಲೋಕದ ವಿಚಿತ್ರವೆನ್ನಬಹುದು!

–ರೇಖಾ ಹಾಲಾಡಿ, ಉಡುಪಿ